ವರದಿಯು ಇನ್ನು ಸರ್ಕಾರಕ್ಕೆ ಬಂದಿರುವುದಿಲ್ಲ

4) ಇಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಯೋಜನೆಯ ಅಂದಾಜು ವರದಿಯನ್ನು ತಯಾರಿಸಲಾಗುತ್ತಿದೆ

5) ಈ ಸರ್ವೇ ಕಾರ್ಯಕ್ಕೆ ಈವರೆಗೂ ಖರ್ಚು ಮಾಡಿದ ಹಣ (ವಿವರಗಳನ್ನು ನೀಡುವುದು)

ಸರ್ವೇ ಕಾರ್ಯಕ್ಕಾಗಿ ಕೆ ಜಿ ಎಫ್ ನಗರಸಭೆಯಿಂದ ರೂ 9 00 ಲಕ್ಷಗಳನ್ನು ಮಂಡಳಿಯು ಸ್ವೀಕರಿಸಿರುತ್ತದೆ ಕರಾರಿನಲ್ಲಿ ನಮೂದಿಸಿರುವ ನಿಬಂಧನೆಯಂತೆ ಸರ್ವೇ ಕಾರ್ಯದ ವರದಿ ಬಂದ ನಂತರವೇ ಹಣ ಪಾವತಿಸಬೇಕಾದ ಕಾರಣ ಈವರೆಗೆ ಸರ್ವೆ ಕಾರ್ಯಕ್ಕೆ ಹಣವನ್ನು ಪಾವತಿ ಮಾಡಿರುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1156(1488)**

ಸದಸ್ಯರ ಹೆಸರು **ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ)**

ಉತ್ತರಿಸುವ ಸಚಿವರು **ಡಾ ಹೆಚ್ ಎಸ್ ಮಹದೇವ ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು)**

ಅ) ಮಕ್ಕಳ ಸಾಹಿತ್ಯಕ್ಕಾಗಿ ಸರ್ಕಾರ ಹಾಲಿ ನೀಡುತ್ತಿರುವ ಪ್ರೋತ್ಸಾಹ ಮತ್ತು ಸಹಾಯಗಳೇನು ,

ಮಕ್ಕಳ ಸಾಹಿತ್ಯಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀನಕ್ಕೊಳಪಡುವ ಸ್ವಾಯತ್ತ ಸಂಸ್ಥೆಗಳಾದ ಕನ್ನಡ ಪುಸ್ತಾಧಿಕಾರ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ಮಕ್ಕಳ ಸಾಹಿತ್ಯ ಪ್ರಕಟಣೆ, ಪ್ರಸಾರ ಮತ್ತು ಧನಸಹಾಯ ನೆರವು ನೀಡಿ ಪ್ರೋತ್ಸಾಹಿಸಲಾಗುತ್ತದೆ

ಆ) ಕಳೆದ 5 ವರ್ಷಗಳಲ್ಲಿ ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ರಾಜ್ಯದಾದ್ಯಂತ ಸರ್ಕಾರದ ವತಿಯಿಂದ ಏರ್ಪಡಿಸಲಾಗಿದ್ದ ಕಾರ್ಯಕ್ರಮಗಳಾವುವು ,

1 <u>ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ</u>

<u>ಅ) ವಿಚಾರ ಸಂಕಿರಣ</u>

2001 ರಲ್ಲಿ ಮಕ್ಕಳ ಸಾಹಿತ್ಯ ಚಿಂತನೆ ಮತ್ತು ಶಿಶು ಸಂಗಮೇಶ ಸ್ಮರಣೆ ವಿಚಾರ ಸಂಕಿರಣವನ್ನು ಬಿಜಾಪುರದಲ್ಲಿ ನಡೆಸಲಾಗಿದೆ

<u>ಆ ಗ್ರಂಥಗಳ ಪ್ರಕಟಣೆ</u>

- 2001–02ರಲ್ಲಿ ಶತಮಾನದ ಮಕ್ಕಳ ಸಾಹಿತ್ಯ ಕೃತಿಯನ್ನು ಎನ್ ಎಸ್ ರಘುನಾಥ್ ಅವರಿಂದ ಸಂಪಾದಿಸಿ ಪ್ರಕಟಿಸಲಾಗಿದೆ
- 2004ರಲ್ಲಿ 'ಭಾರತೀಯ ಮಕ್ಕಳ ಸಾಹಿತ್ಯ ಸಮೀಕ್ಷೆ' ಎಂಬ ಡಾ ನಿರುಪಮಾ ಅವರು ರಚಿಸಿದ ಗ್ರಂಥ ಪ್ರಕಟಿಸಲಾಗಿದೆ

- ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕಳೆದ 5 ವರ್ಷಗಳಲ್ಲಿ ಪ್ರತಿವರ್ಷ ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಾರ್ಷಿಕ ಸಂಕಲನಗಳನ್ನು ಪ್ರಕಟಿಸಿರುತ್ತದೆ

ಇ) ಮಕ್ಕಳ ಸಾಹಿತ್ಯ ಪ್ರಕಾರಕ್ಕೆ ಪುಸ್ತಕ ಬಹುಮಾನ

2000ನೇ ಸಾಲಿನಲ್ಲಿ ಆರ್ ಕೆ ಶಾನಭಾಗ್‌ರವರ 'ಅಪೂರ್ವ'

2001ನೇ ಸಾಲಿನಲ್ಲಿ ಶರಣಗೌಡ ಎರಡೆತ್ತಿನವರ 'ಮುತ್ತಿನ ಬೆಟ್ಟ'

2002ನೇ ಸಾಲಿನಲ್ಲಿ ಆರ್ ವಿ ಭಂಡಾರಿಯವರ 'ಯಶೋಗೀತೆ'

2003ನೇ ಸಾಲಿನಲ್ಲಿ ಗಣೇಶ್ ಪಿ ನಾಡೋರವರ 'ಬೆಳ್ಳಕ್ಕಿ' ಮತ್ತು 'ಬುಲ್ ಜುಲ್'

2004ನೇ ಸಾಲಿನಲ್ಲಿ ಸಂಪಟೂರು ವಿಶ್ವನಾಥ್ ಅವರ 'ಸುವರ್ಣ ಕೀಟ'

2005ನೇ ಸಾಲಿನಲ್ಲಿ ಅನಂದ ಪಾಟೀಲರ 'ಡಂಡಂ ಕಾರಿಗೆ ಡಿಂಡಿಂ ಗಾಡಿ'

ಈ) ಮಕ್ಕಳ ಸಾಹಿತ್ಯ ರಚನಾ ಕಮ್ಮಟ

ದಿನಾಂಕ 03 11 2003 ರಿಂದ ದಿನಾಂಕ 08 11 2003ರವರೆಗೆ ಗದಗ ಜಿಲ್ಲೆಯ ಸಿಂಗಟಾಟುರಿನಲ್ಲಿ ಮಕ್ಕಳ ಸಾಹಿತ್ಯ ರಚನಾ ಕಮ್ಮಟ ನಡೆಸಲಾಗಿದೆ

ಡಿಸೆಂಬರ್ 2006ರಲ್ಲಿ ಅಂಕೋಲಾದಲ್ಲಿ 2 ದಿನಗಳ ಮಕ್ಕಳ ಸಾಹಿತ್ಯ ಕಮ್ಮಟವನ್ನು ನಡೆಸಲಾಗುವುದು

1 ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಮಕ್ಕಳ ಸಾಹಿತ್ಯಕ್ಕೆ ಸಂಬಧಿಸಿದಂತೆ ಹಮ್ಮಿಕೊಂಡ ಕಾರ್ಯಕ್ರಮಗಳು

ಅ) ಗ್ರಂಥಗಳ ಪ್ರಕಟಣೆ

ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಮಕ್ಕಳ ಮನೋವಿಕಾಸಕ್ಕಾಗಿ ಮೌಲಿಕವಾದ ಕೃತಿಗಳನ್ನು ನಿಯತವಾಗಿ ಪ್ರಕಟಿಸುತ್ತಿದೆ 2000ನೇ ಸಾಲಿನಿಂದ ಈವರೆವಿಗೆ ಈ ಕೆಳಕಂಡ ಕೃತಿಗಳನ್ನು ಪ್ರಕಟಿಸಿರುತ್ತದೆ

- ಸುರೇಶ್ ಕುಲಕರ್ಣಿ ಯವರ 'ಪಕ್ಷಿ ಸಂಕುಣ'
- ಶಿಶು ಸಂಗಮೇಶ ಅವರ 'ಆಯ್ದ ಮಕ್ಕಳ ಸಾಹಿತ್ಯ'
- ಬೋಳುವಾರು ಮಹಮದ್ ಕುಂಜಿಯವರ 'ಮಕ್ಕಳ ನಾಟಕಗಳು' ಭಾಗ 1,2,3 ಮತ್ತು 'ಪಾಪು ಗಾಂಧಿ–ಗಾಂಧಿ ಬಾಪಧ ಆದ ಕಧೆ'
- ಡಾ ಜಿ ರಾಮಕೃಷ್ಣರವರ ಕಲಿಕಾ ಮೇಷ್ಟ್ರು' ಅಂಚೆ ಕಾರ್ಡಿನಲ್ಲಿ ಕಧೆಗಳು ಎಂಬ ಶಿರ್ಷಿಕೆಯಡಿ ವಿಶಿಷ್ಟವಾದ 200 ಕಧೆಗಳ ಒಂದು ಬಾಕ್ಸ್‌ನಂತೆ ಪ್ರಕಟಿಸಿ ಹೊರತರಲು ಕ್ರಮಕೈಗೊಳ್ಳಲಾಗಿದೆ

ಆ) ಮಕ್ಕಳ ಸಾಹಿತ್ಯ ಕೃತಿಗೆ ನಗದು ಬಹುಮಾನ

- ಅತ್ಯುತ್ತಮ ಮಕ್ಕಳ ಪುಸ್ತಕ ಸೊಗಸು ಯೋಜನೆಯಡಿ ಮಕ್ಕಳ ಸಾಹಿತ್ಯ ಕೃತಿಗೆ ಈ ಕೆಳಕಂಡ ಕೃತಿಗಳಿಗೆ ರೂ 5000 00ದಂತೆ ನಗದು ಬಹುಮಾನ ನೀಡುತ್ತಾ ಬರಲಾಗಿದೆ
- 2001ರಲ್ಲಿ ಶ್ರೀ ಸೂರ್ಯ ಪ್ರಕಾಶನ ಬೆಂಗಳೂರು ಇವರ 'ತುಂಟ ಕೃಷ್ಣನ ಕಂಡರೆ ಕೇಳ'
- 2003 ರಲ್ಲಿ ಭೂಮಂಡಲ ಪ್ರಕಾಶನ ಬೆಳಗಾವಿ ಅವರ ಅಮ್ಮಾ ಕೇಳೆ'
- 2004 ರಲ್ಲಿ ಗುರುಸಿದ್ದ ಸಿದ್ದಲಿಂಗ ಬಾನಾಸಿ ಇವರ 'ನದಿಲು'
- 2005 ರಲ್ಲಿ ಜೀನಹಳ್ಳಿ ಸಿದ್ದಲಿಂಗಪ್ಪರವರ 'ಹಾಡು ನನ್ನ ಹಾಡು'

ಇ) 'ಮಕ್ಕಳ ಅಕಾಡೆಮಿ' ರಚಿಸಬೇಕೆಂಬ ಬಹುಕಾಲದ ಬೇಡಿಕೆಯ ಬಗ್ಗೆ ಸರ್ಕಾರದ ನೀಲುವೇನು?

ಮಕ್ಕಳ ಸಾಹಿತ್ಯ ಅಕಾಡೆಮಿ ಸ್ಥಾಪಿಸುವ ಬಗ್ಗೆ ಬೇಡಿಕೆ ಬಂದಿದ್ದು ಈಗಾಗಲೇ ಕರ್ನಾಟಕ ಸರ್ಕಾರವು ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಕನ್ನಡ ಪುಸ್ತಕ ಪ್ರಾಧಿಕಾರ ರಚಿಸಿರುವುದರಿಂದ ಸದರಿ ಅಕಾಡೆಮಿಗಳು ಮಕ್ಕಳ ಸಾಹಿತ್ಯ ಅಭಿವೃದ್ದಿಗೆ ಹಲವಾರು ಯೋಜನೆಗಳನ್ನು ರೂಪಿಸಿಕೊಂಡು ಬರುತ್ತಿವೆ ಸದರಿ ಅಕಾಡೆಮಿಗಳಿಗೆ ಮಕ್ಕಳ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ಹೊಣೆಗಾರಿಕೆ ಮತ್ತು ನಿಶ್ಚಿತ ಯೊಜನೆಗಳನ್ನು ರೂಪಿಸಿಕೊಳ್ಳಲು ಸೂಚನೆ ನೀಡುವುದು ಸೂಕ್ತವೆಂದು ನಿರ್ಧರಿಸಿ ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸಾಹಿತ್ಯ ಕೃತಿಗಳನ್ನು ಕನ್ನಡದಲ್ಲಿ ಪ್ರಕಟಿಸುವುದಲ್ಲದೆ ಇತರೆ ಭಾಷೆಗಳಿಂದ ಮಕ್ಕಳ ಸಾಹಿತ್ಯದ ಉತ್ತಮ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಬೇಕೆಂಬ ವಿಶೇಷ ಸೂಚನೆಗಳನ್ನು ಸಹ ನೀಡಿರುವ ಹಿನ್ನಲೆಯಲ್ಲಿ ಪ್ರತ್ಯೇಕ ಮಕ್ಕಳ ಸಾಹಿತ್ಯ ಅಕಾಡೆಮಿ ಸ್ಥಾಪಿಸುವ ಅಗತ್ಯವಿಲ್ಲವೆಂದು ಅಭಿಪ್ರಾಯ ಪಡಲಾಗಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1157(1350)**

ಸದಸ್ಯರ ಹೆಸರು **ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್(ಸೇಡಂ)**

ಉತ್ತರಿಸುವವರು **ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)**

ಅ) ಎಸ್ ಎಫ್ ಸಿ ಅಡಿಯಲ್ಲಿ 2006–07ನೇ ಸಾಲಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾದ ವಿಶೇಷ ಉದ್ದೇಶ/ವಿವೇಚನಾ ನಿಧಿಯ ವಿವರಗಳನ್ನು ತಿಳಿಸುವುದು (ನಗರ ಸ್ಥಳೀಯ ಸಂಸ್ಥೆವಾರು ಬಿಡುಗಡೆ ಮಾಡಿದ ವಿವರ ನೀಡುವುದು)